**ನಾಂದಿಪದ**

# ಗಾಂಧಿ ಪಾಠ ಮತ್ತು ನೋಟ

ಕಳೆದ ಒಂದು ಶತಮಾನದ ಅವಧಿಯಲ್ಲಿ, ತನ್ನ ಇರುವು ಮತ್ತು ಸಾವಿನ ನಂತರವೂ ಮನುಕುಲವನ್ನು ಅಂತರ್ಜಲದಂತೆ ಪೊರೆಯುತ್ತಿರುವ ಮಹಾನ್ ಚೇತನ ಮಹಾತ್ಮ ಗಾಂಧಿ. ಸತ್ಯ–ಅಹಿಂಸೆಗಳ ಪ್ರಯೋಗಶಾಲೆಯ ರೂಪದಲ್ಲಿ ಜೀವನ ನಡೆಸಿದ ಗಾಂಧಿ, ಮನುಷ್ಯ ಮಾತ್ರದವರಿಗೆ ಸದಾ ಕಾಲ ಬೆರಗಿನಂತೆಯೇ ಉಳಿದುಬಂದವರು. ತಾತ್ವಿಕವಾಗಿ ಗಾಂಧಿಯನ್ನು ವಿರೋಧಿಸುವುದು ಕೂಡ ಗಾಂಧಿಪ್ರೇಮದ ಒಂದು ರೂಪವೇ ಆಗಿದೆ ಎನ್ನುವಮಟ್ಟಿಗೆ ಗಾಂಧಿ ವಿಶ್ವವನ್ನು, ವಿಶೇಷವಾಗಿ ಭಾರತೀಯರನ್ನು ಆವರಿಸಿಕೊಂಡಿದ್ದಾರೆ. ಇಂಥ ವಿಶಿಷ್ಟ ಚೈತನ್ಯವನ್ನು ಭಿನ್ನ ನೆಲೆಗಳಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವ ಬರಹಗಳು ಈ ಸಂಚಿಕೆಯಲ್ಲಿವೆ. ಸತ್ಯದ ಅನ್ವೇಷಣೆಯ ದಾರಿಗಳಲ್ಲಿ, ಗಾಂಧೀಜಿಗೆ ದೀವಿಗೆಯ ರೂಪದಲಿ ಒದಗಿಬಂದ ಮಾಧ್ಯಮಗಳಲ್ಲಿ ಪತ್ರಿಕೋದ್ಯಮ ಮುಖ್ಯವಾದುದು. ಜನರನ್ನು ತಲುಪಲು, ಸತ್ಯವನ್ನು ಮನಗಾಣಿಸಲು ಅವರು ಪತ್ರಿಕೆಗಳನ್ನು ಬಳಸಿಕೊಂಡರು. 'ಇಂಡಿಯನ್ ಒಪೀನಿಯನ್', 'ಸತ್ಯಾಗ್ರಹಿ', 'ಯಂಗ್ ಇಂಡಿಯಾ', 'ನವಜೀವನ್', 'ಹರಿಜನ್' ಪತ್ರಿಕೆಗಳನ್ನು ನಡೆಸುತ್ತ, ಅವುಗಳಿಗೆ ಬರೆದ ಅವರು ಪತ್ರಿಕೋದ್ಯಮದಲ್ಲಿ ನೈತಿಕತೆ, ಸೇವೆ, ಸತ್ಯಾನ್ವೇಷಣೆಯನ್ನು ಪ್ರಮುಖ ಗುರಿ–ದಾರಿಯನ್ನಾಗಿಸಿಕೊಂಡರು. 'ಯೋಚನೆ ಮಾಡದೆ, ವಿಚಾರ ಮಾಡದೆ ಬರೆದ ಒಂದು ಮಾತನ್ನಾಗಲೀ, ಉದ್ದೇಶಪೂರ್ವಕವಾದ ಅತಿಶಯೋಕ್ತಿಯನ್ನಾಗಲೀ ಬರೆದುದು ನನಗೆ ನೆನಪಿಲ್ಲ' ಎಂದು ತಮ್ಮ ಪತ್ರಿಕಾಬರಹಗಳ ಬಗ್ಗೆ ಬರೆದುಕೊಂಡ ಗಾಂಧೀಜಿ, ವೃತ್ತಿವಂತ ಪತ್ರಕರ್ತರಾಗಿದ್ದರು. ಅವರ ಬರಹಗಳಿಗೆ ಸರಳ–ಪಾರದರ್ಶಕ ಗುಣ ಬಂದದ್ದು ಕೂಡ ಕಾಲಕಾಲಕ್ಕೆ ಬರವಣಿಗೆ ಮಾಡಲೇಬೇಕಾದ ಅವರ ಪತ್ರಿಕಾವೃತ್ತಿಯಿಂದ. ಪತ್ರಕರ್ತ ಗಾಂಧಿಯ ಅವಲೋಕನ, ಮಹಾತ್ಮನ ವ್ಯಕ್ತಿತ್ವದ ಹೊಳಪನ್ನು ಕಾಣಿಸುವುದರ ಜೊತೆಗೆ, ಪತ್ರಿಕೋದ್ಯಮ ವೃತ್ತಿಯ ಅಂತಃಸತ್ವವನ್ನು ಇಂದಿನ ಪತ್ರಕರ್ತರು, ಬರಹಗಾರರು ಹಾಗೂ ಓದುಗರಿಗೆ ಕಾಣಿಸುವ ಪ್ರಯತ್ನವೂ ಆಗಿದೆ. ಗಾಂಧಿ ಕಲಿಸಿದ ಪತ್ರಿಕೋದ್ಯಮದ ಪಾಠಗಳು ಎಲ್ಲರನ್ನೂ ಪೊರೆಯುವ ಶಕ್ತಿ ಹೊಂದಿವೆ.



ಗಾಂಧೀಜಿಯ ಅಸಾಧಾರಣ ವ್ಯಕ್ತಿತ್ವವನ್ನು ಅನನ್ಯ ಬಣ್ಣ–ಗೆರೆಗಳಲ್ಲಿ ಮೂಡಿಸಿದ ಕಲಾವಿದರ ಕಲಾಕೃತಿಗಳ ಬಗ್ಗೆ ಮಾತನಾಡುವ 'ಗಾಂಧಿ: ವಿಶ್ವಾತ್ಮಕ ವ್ಯಕ್ತಿತ್ವದ ದೃಶ್ಯ ಧ್ಯಾನ' ಬರಹ, ಮಹಾತ್ಮನ ಬದುಕು–ವ್ಯಕ್ತಿತ್ವ–ಚಿಂತನೆ ದೇಶ–ಕಾಲಗಳನ್ನು ಮೀರಿ ವಿಸ್ತರಿಸುತ್ತಲೇ ಇರುವುದನ್ನು ಸೂಚಿಸುವಂತಿದೆ. ದೃಶ್ಯಕಲೆಯಲ್ಲಿ ಮೂಡಿದ ಗಾಂಧೀಜಿಯ ಹಲವು ಬಿಂಬಗಳ ಚರ್ಚೆಯ ಈ ಬರಹ ಸಹೃದಯರ ಭಾವಕೋಶಗಳಲ್ಲಿ ಬಳ್ಳಿಯಂತೆ ಹಬ್ಬುವ ಗುಣ ಹೊಂದಿದೆ. ಗಾಂಧೀಜಿಯನ್ನು ಸ್ಮರಿಸುವ ಮುಖ್ಯ ಬರಹಗಳ ಜೊತೆಗೆ ಎಂದಿನಂತೆ ಕತೆ, ಪ್ರಬಂಧ ಸೇರಿದಂತೆ ಚೇತೋಹಾರಿ ಬರಹಗಳು ಈ ಸಂಚಿಕೆಯಲ್ಲಿವೆ. ಮಳೆದಿನಗಳ ಈ ಸಂಚಿಕೆಯ ಬರಹಗಳು ಹಾಗೂ ಕಲಾಕೃತಿಗಳು ಮಳೆಹನಿಗಳ ಆರ್ದ್ರತೆ, ಅಮೃತಗುಣವನ್ನು ಒಳಗೊಳ್ಳಲು ಹಂಬಲಿಸುತ್ತಿರುವ ಅನುಭವವನ್ನು ಓದುಗರಿಗೆ ದಾಟಿಸಲು ತವಕಿಸುತ್ತಿವೆ.

**ಮಯೂರ ಬಳಗ**